ಸಾರಾಂಶ

# ಆಹಾರ ಭದ್ರತೆ ಹಾಗೂ ಬಡತನ ನಿರ್ಮೂಲನದ ಸಂದರ್ಭದಲ್ಲಿ ಸುಸ್ಥಿರಾತ್ಮಕ ಸಣ್ಣ-ಪ್ರಮಾಣದ ಮೀನುಗಾರಿಕೆ ಪಡೆಯುವಿಕೆಗೆ ಸ್ವಯಂ ಪ್ರೇರಿತ ಮಾರ್ಗದರ್ಶಿಕೆಗಳು



ಪ್ರಕಟಣೆ :
**ಮೀನುಗಾರರಿಗೆ ಬೆಂಬಲಿತವಾಗಿರುವ ಅಂತರರಾಷ್ಟ್ರೀಯ ಒಕ್ಕೂಟ (ಐಸಿಎಸ್ಎಫ್)**
೨೭ ಕಾಲೇಜ್ ರೋಡ್ ಚನ್ನೈ ೬೦೦ ೦೦೬,
ಭಾರತ

ಫೋನ್ : (೯೧) ೪೪–೨೮೨೭ ೫೩೦೩
ಫ್ಯಾಕ್ಸ್ : (೯೧) ೪೪–೨೮೨೫ ೪೪೫೭
ಇಮೇಲ್ : icsf@icsf.net
ವೆಬ್‌ಸೈಟ್ : www.icsf.net

ಮೀನುಗಾರರ ಬೆಂಬಲವಾಗಿರುವ ಅಂತರರಾಷ್ಟ್ರೀಯ ಒಕ್ಕೂಟ ಜಾಗತಿಕ ಮಟ್ಟದಲ್ಲಿನ ಮೀನುಗಾರರ ಸಮಸ್ಯೆಗಳ ಬಗ್ಗೆ ಕೆಲಸ ಮಾಡಿತ್ತಿರುವ ಅಂತರರಾಷ್ಟ್ರೀಯ ಸರ್ಕಾರೇತರ ಸಂಸ್ಥೆ. ಈ ಸಂಸ್ಥೆ ಯುಎನ್‌ನ ಆರ್ಥಿಕ ಹಾಗೂ ಸಾಮಾಜಿಕ ಮಂಡಳಿಗೆ ಸಮಾನ ಮಟ್ಟದಲ್ಲಿದ್ದು ಮತ್ತು ಅಂತರರಾಷ್ಟ್ರೀಯ ಶ್ರಮಿಕ ಸಂಸ್ಥೆಯ ಸರ್ಕಾರೇತರ ಅಂತರರಾಷ್ಟ್ರೀಯ ಸಂಸ್ಥೆಗಳ ವಿಶೇಷ ಪಟ್ಟಿಯಲ್ಲಿ ಹೆಸರಿಸಲಾಗಿರುತ್ತದೆ. ಇದು ಆಹಾರ ಮತ್ತು ವ್ಯವಸಾಯ ಸಂಸ್ಥೆಯ ಜೊತೆ ಸಂಪರ್ಕ ಮಟ್ಟದ ಸಂಬಂಧ ಹೊಂದಿದೆ.

ಸಮುದಾಯದ ಸಂಘಟನಾಕಾರರ, ಶಿಕ್ಷಕರ,ತಂತ್ರಜ್ಞರ,ಸಂಶೋಧಕರ ಹಾಗೂ ವಿಜ್ಞಾನಿಗಳ ಜಾಗತಿಕ ಮಟ್ಟದ ಜಾಲತಾಣ ವಾಗಿ ಮೀನುಗಾರರ ಬೆಂಬಲಿತವಾಗಿರುವ ಅಂತರರಾಷ್ಟ್ರೀಯ ಒಕ್ಕೂಟ ಮೇಲ್ವಿಚಾರಣೆ ಮತ್ತುಸಂಶೋಧನೆ ವಿನಿಮಯ ಮತ್ತು ತರಬೇತಿ, ಆಂದೋಲನಗಳು ಮತ್ತು ಕಾರ್ಯಾಚರಣೆಗಳು, ಹಾಗೂ ಸಮುದಾಯಗಳನ್ನು ಒಳಗೊಂಡಿದೆ.

೨೦೧೬

ಚಿತ್ರಕಲೆ ಮತ್ತು ವಿನ್ಯಾಸ: ಅರ್ಜುನ್ ಶಂಕರ್

ISBN 978 93 80802 62 6

ಸಾರಾಂಶ

# ಆಹಾರ ಭದ್ರತೆ ಹಾಗೂ ಬಡತನ ನಿರ್ಮೂಲನದ ಹಂತದಲ್ಲಿ ಸುಸ್ಥಿರಾತ್ಮಕ ಮೀನುಗಾರಿಕೆ ಪಡೆಯುವುದಕ್ಕೆ ಸ್ವಯಂ ಪ್ರೇರಿತ ಮಾರ್ಗದರ್ಶಿಕೆಗಳು

ಆಹಾರ ಮತ್ತು ಭದ್ರತೆಯ ಸಂದರ್ಭದಲ್ಲಿ ಸುಸ್ಥಿರಾತ್ಮಕ ಸಣ್ಣ-ಪ್ರಮಾಣದ ಮೀನುಗಾರಿಕೆಯನ್ನು ಪಡೆಯುವುದಕ್ಕಾಗಿ ಸಂಯುಕ್ತ ರಾಷ್ಟ್ರಗಳ ಸಂಸ್ಥೆಯಾದ ಆಹಾರ ಮತ್ತು ವ್ಯವಸಾಯ ಸದಸ್ಯ ರಾಷ್ಟ್ರಗಳಿಂದ ಮಾರ್ಗದರ್ಶಿಕೆಗಳು ರೂಪಿಸಲ್ಪಟ್ಟವು (ಆ.ವ್ಯ.ಸ.) ಹಾಗೂ ಜೂನ್ ೨೦೧೪ ರಂದು ಅಧಿಕೃತವಾಗಿ ಒಂದು ಅಂತರರಾಷ್ಟ್ರೀಯ ಅಸ್ತ್ರವೆಂದು ಒಪ್ಪಲ್ಪಡಲಾಯಿತು.

ಸುಸ್ಥಿರಾತ್ಮಕ ಸಣ್ಣ-ಪ್ರಮಾಣದ ಮೀನುಗಾರಿಕೆ ಪಡೆಯುವಿಕೆಯ ವಿಶೇಷವೆಂದರೆ ಅವರ ದೇಶಗಳ ಮೀನುಗಾರಿಕೆ ಕ್ಷೇತ್ರದಲ್ಲಿ ಅವರ ಪಾತ್ರ ಹಾಗೂ ಅವರ ಸ್ಥಾನ-ಮಾನವನ್ನು ಹೆಚ್ಚಿನ ರೀತಿಯಲ್ಲಿ ಗುರುತಿಸುವುದಕ್ಕಾಗಿ ಅವರು ಮೊರೆ ಇಟ್ಟು ನಡೆಸಿದ ಧೀರ್ಘ ಕಾಲದ ಹೋರಾಟಗಳ ಇತಿಹಾಸದ ಫಲವಾಗಿ ಇವು ರೂಪಿಸಲ್ಪಟ್ಟಿವೆ.

ಜಾಗತಿಕ ಹಂತದಲ್ಲಿ ಸಣ್ಣ-ಪ್ರಮಾಣದ ಮೀನುಗಾರರು ಮೀನು ಆರ್ಥಿಕತೆಯ ಬೆನ್ನೆಲುಬಾಗಿದ್ದಾಗ್ಯೂ ಕೂಡಾ, ಮೀನುಗಾರಿಕೆ ಕ್ಷೇತ್ರದ ಆಧುನೀಕರಣ ಪ್ರಕ್ರಿಯೆಯಲ್ಲಿ ಇವರನ್ನು ನಿರ್ಲಕ್ಷಿಸಲಾಗಿದೆ ಹಾಗೂ ಅನೇಕ ಬಾರಿ ಪಕ್ಷ ಪಾತ ಧೋರಣೆ ತೋರಿಸಲಾಗಿದೆ. ಈ ನಿರ್ಲಕ್ಷಕ್ಕೆ ಹೊರತಾಗಿಯೂ ಈ ಕ್ಷೇತ್ರ ಬಹಳಷ್ಟು ದೇಶಗಳಲ್ಲಿ ಪ್ರಖರವಾಗಿಯೇ ಉಳಿದಿದೆ.

ಆದಾಗ್ಯೂ, ದಶಕಗಳಿಂದ ಈ ರೀತಿಯ ಅಧಿಕೃತ ನಿರ್ಲಕ್ಷಕ್ಕೆ ಒಳಗಾದ ಪರಿಣಾಮವಾಗಿ ಬಹಳ ದೇಶಗಳಲ್ಲಿ , ಸಣ್ಣ-ಪ್ರಮಾಣದ ಮೀನುಗಾರಿಕೆ ಸಮುದಾಯವು ಮೀನು ಹಿಡಿಯುವಿಕೆಯಲ್ಲಿ ಅವರ ಕೊಡುಗೆಯ ಪಾಲು ಅತ್ಯುನ್ನತವಾಗಿದ್ದಾಗ್ಯೂ ಕೂಡಾ, ಅವರು ಬಡವರಾಗಿ ಹಾಗೂ ಅಂಚಿಗೆ ಒತ್ತರಿಸಲ್ಪಟ್ಟವರಾಗಿ ಮುಂದುವರೆದಿದ್ದಾರೆ ಹಾಗೂ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಅಭಿವೃದ್ಧಿಯಲ್ಲಿ ಮಾನವ ಹಕ್ಕುಗಳಿಂದ ವಂಚಿತರಾಗಿದ್ದಾರೆ.


ಸುಸ್ಥಿರಾತ್ಮಕ ಸಣ್ಣ-ಪ್ರಮಾಣದ ಮೀನುಗಾರಿಕೆಯ ಪಡೆಯುವಿಕೆಗಾಗಿ ಇರುವ ಮಾರ್ಗದರ್ಶಿಕೆಗಳಿಂದ ಆಹಾರ ಮತ್ತು ವ್ಯವಸಾಯ ಸಂಸ್ಥೆಯ ಸದಸ್ಯ ದೇಶಗಳಿಂದ ಈ ವಾಸ್ತವ ಗುರುತಿಸಲ್ಪಟ್ಟಿದೆಯಲ್ಲದೇ, ಅದೇ ಸಂದರ್ಭದಲ್ಲಿ ಮೀನುಗಾರಿಕೆಯ ಅಭಿವೃದ್ಧಿ ಹಾಗೂ ನಿರ್ವಹಣೆಯಲ್ಲಿ ಸಣ್ಣ-ಪ್ರಮಾಣದ ಮೀನುಗಾರಿಕೆಯನ್ನು ಕೇಂದ್ರ ಬಿಂದುವಿಗೆ ತರುವ ಪ್ರಯತ್ನ ಕೂಡಾ ಆಗಿದೆ.

ಮೀನುಗಾರರಿಗೆ ಬೆಂಬಲವಾಗಿರುವ ಅಂತರರಾಷ್ಟ್ರೀಯ ಒಕ್ಕೂಟ ಈ ಮಾರ್ಗದರ್ಶಿಕೆಗಳನ್ನು ರೂಪಿಸುವ ಪ್ರಕ್ರಿಯೆಯನ್ನು ಉನ್ನತ ಮಟ್ಟದ ಭಾಗವಹಿಸುವಿಕೆಯ ಕಾರ್ಯವಿಧಾನವಾಗಿ ಮಾಡುವಲ್ಲಿ ಒಂದು ಮುಖ್ಯ ಪಾತ್ರ ವಹಿಸಿದಂತಹ ನಾಗರಿಕ ಸಮಾಜ ಸಂಸ್ಥೆಯಾಗಿರುತ್ತದೆ. ಈ ಮಾರ್ಗ ದರ್ಶಿಕೆಗಳನ್ನು ಅಧಿಕೃತವಾಗಿ ಆಹಾರ ಮತ್ತು ವ್ಯವಸಾಯ ಸಂಸ್ಥೆ ಮತ್ತು ಯು.ಎನ್. ನಿಂದ ಚಂದ್ರಿಕಾ ಶರ್ಮರವರ ನೆನಪಿಗಾಗಿ ಅರ್ಪಣೆ ಮಾಡಲಾಗಿದೆ. ಮೀನುಗಾರರಿಗೆ ಬೆಂಬಲವಾಗಿರುವ ಅಂತರರಾಷ್ಟೀಯ ಒಕ್ಕೂಟದ ಕಾರ್ಯನಿರ್ವಾಹಕ ಅಧಿಕಾರಿಯಾಗಿದ್ದು, ಈ ಮಾರ್ಗದರ್ಶಿಕೆಗಳ ಅಂಗೀಕಾರಕ್ಕೆ ಬೆಂಬಲ ಹುಟ್ಟು ಹಾಕುವುದಕ್ಕಾಗಿ, ಆಹಾರ ಮತ್ತು ವ್ಯವಸಾಯ ಸಂಸ್ಥೆಯ ಕಾನ್ಫರೆನ್ಸ್‌ಗೆ ಮಂಗೋಲಿಯಾಕ್ಕೆ ಪ್ರಯಾಣಿಸುತ್ತಿದ್ದ ಎಂ.ಹೆಚ್. ೩೭೦ ಮಲೇಶಿಯಾದ ವಿಮಾಣ ಕಾಣೆಯಾದಾಗಿನಿಂದಲೂ ಈಕೆ ಕಾಣೆಯಾಗಿದ್ದಾರೆ.

ಈ ಮಾರ್ಗದರ್ಶಿಕೆಗಳು ೧೦೦ ಪ್ಯಾರಾಗ್ರಾಫ್ ಹೊಂದಿದ್ದು, ೧೩ ಸೆಕ್ಷನ್‌ಗಳಲ್ಲಿ ಇವುಗಳನ್ನು ವಿವರಿಸಲಾಗಿದೆ. ಈ ದಾಖಲೆ ಮಾರ್ಗದರ್ಶಿಕೆಗಳ ವಿಚಾರಗಳ ಸಾರಾಂಶ ಮಾತ್ರವಾಗಿದೆ. ಕಳೆದ ನಾಲ್ಕು ದಶಕಗಳಿಂದ ಸಣ್ಣ-ಪ್ರಮಾಣದ ಮೀನುಗಾರಿಕೆಯಲ್ಲಿ ಜಗತ್ತಿನ ಅನೇಕ ಭಾಗಗಳಲ್ಲಿ, ವಿಶೇಷವಾಗಿ ಕೇರಳದಲ್ಲಿ ಕೆಲಸ ಮಾಡಿದ ಮೀನುಗಾರರಿಗೆ ಬೆಂಬಲವಾಗಿರುವ ಅಂತರರಾಷ್ಟ್ರೀಯ ಒಕ್ಕೂಟದ ಸ್ಥಾಪಕರಾದ ಜಾನ್ ಕುರಿಯನ್‌ರವರಿಂದ ಇದು ತಯಾರಾಗಲ್ಪಟ್ಟಿದೆ.

# ಮುನ್ನುಡಿ

ಸುಸ್ಥಿರಾತ್ಮಕ ಸಣ್ಣ-ಪ್ರಮಾಣದ ಮೀನುಗಾರಿಕೆಯ ಮಾರ್ಗದರ್ಶಿಕೆಗಳು ಗಿಎಓಇರ ಆಹಾರ ಮತ್ತು ವ್ಯವಸಾಯ ಸಂಸ್ಥೆಯ ಜವಾಬ್ಧಾರಿಯುತ ಮೀನುಗಾರಿಕೆಗಿರುವ ನಿಯಮಾವಳಿಗಳಿಗೆ ಪೂರಕವಾಗಿ ರೂಪಿತವಾದವುಗಳು. ಇವು ಸಣ್ಣ-ಪ್ರಮಾಣದ ಮೀನುಗಾರಿಕೆ ಕುರಿತು ಮಾತನಾಡುತ್ತವೆ ಹಾಗೂ ಮಹಿಳೆ ಮತ್ತು ಪುರುಷರಿಂದ ಮಾಡಲ್ಪಡುವ ಮೌಲಿಕ ಸರಣಿಯ ಎಲ್ಲಾ ಚಟುವಟಿಕೆಗಳನ್ನು ಇವು ಒಳಗೊಂಡಿವೆ. ಸಣ್ಣ-ಪ್ರಮಾಣದ ಮೀನುಗಾರಿಕೆಯು ಪ್ರಪಂಚದ ಮೀನು ಹಿಡಿಯುವಿಕೆಯ ಅರ್ಧದಷ್ಟನ್ನು ಕೊಡುಗೆಯಾಗಿ ನೀಡುತ್ತದೆ. ಹಾಗೂ ಜಗತ್ತಿನ ೯೦% ಮೀನುಗಾರರು ಹಾಗೂ ಮೀನಿನ ಕೆಲಸಗಾರರನ್ನು ನೇಮಕ ಮಾಡಿಕೊಳ್ಳುತ್ತದೆ. ಮೀನುಗಾರಿಕೆ ಹಾಗೂ ಮೀನಿನ ಸಮುದಾಯಗಳು ಅವರ ಪ್ರದೇಶದ ಮೇಲೆ ಅವಲಂಬಿತವಾಗಿರುವ ನಿರ್ಧಿಷ್ಟ ಗುಣ ಲಕ್ಷಣಗಳನ್ನು ಹೊಂದಿದ್ದು, ವೈವಿಧ್ಯಮಯ ಹಾಗೂ ಉಪಕ್ಷೇತ್ರವನ್ನು ಪ್ರತಿನಿಧಿಸುತ್ತವೆ. ಇವು ಬಹತೇಕವಾಗಿ ಕುಟುಂಬದ ವ್ಯವಹಾರವಾಗಿರುತ್ತವೆ, ಸ್ಥಳೀಯ ಸಮುದಾಯಗಳಲ್ಲಿ ಬಲವಾಗಿ ಬೇರೂರಿರುತ್ತವೆ. ಇವರು ಮೂಲೆ ಗುಂಪಾಗುತ್ತಲೇ ಇದ್ದಾರೆ. ಸಣ್ಣ - ಪ್ರಮಾಣದ ಮೀನು ಸಮುದಾಯಗಳಲ್ಲಿ ಬಡತನ ಸ್ವರೂಪದಲ್ಲಿಅನೇಕ ಆಯಾಮಗಳನ್ನು ಹೊಂದಿರುತ್ತದೆ. ಸಣ್ಣ-ಪ್ರಮಾಣದ ಮೀನುಗಾರಿಕೆಯ ಕೊಡುಗೆಯನ್ನು ಭದ್ರಪಡಿಸುವ ಹಾಗೂ ಹೆಚ್ಚಿಸಿಕೊಳ್ಳುವುದಕ್ಕೆ ಹಲವಾರು ಎಡರು-ತೊಡರುಗಳಿವೆ. ಈ ಮಾರ್ಗದರ್ಶಿಕೆಗಳು ಅನನ್ಯವಾದ, ಭಾಗವಹಿಸುವಿಕೆಯ ಹಾಗೂ ಸಮಾಲೋಚನೆ ಮುಖಾಂತರ ರೂಪಗೊಂಡಿವೆ. ಇವು ಅಂತರರಾಷ್ಟ್ರೀಯ ಮಾನವ- ಹಕ್ಕುಗಳ ಗುಣ ಮಟ್ಟದ ಜೊತೆ ಸಹಮತ ಹೊಂದಿದ್ದು, ಅವುಗಳನ್ನು ಉತ್ತೇಜಿಸುತ್ತವೆ.




# ೧. ಗುರಿಗಳು

ಸುಸ್ಥಿರಾತ್ಮಕ ಸಣ್ಣ–ಪ್ರಮಾಣದ ಮೀನುಗಾರಿಕೆಯ ಮಾರ್ಗದರ್ಶಿಕೆಗಳ ಗುರಿಗಳು ದೃಢಪಡಿಸುವುದೇನೆಂದರೆ, ಸಣ್ಣ–ಪ್ರಮಾಣದ ಮೀನುಗಾರಿಕೆಗಳು:

- ಜಾಗತಿಕ ಆಹಾರ ಭದ್ರತೆ ಹೆಚ್ಚಿಸುವಿಕೆ
- ಈ ಜಗತ್ತಿನ ಆರ್ಥಿಕ ಹಾಗೂ ಸಾಮಾಜಿಕ ಭವಿಷ್ಯಕ್ಕೆ ಅವರ ಕೊಡುಗೆ ಹೆಚ್ಚಿಸುವುದು
- ಮೀನುಗಾರರ ಸಾಮಾಜಿಕ –ಆರ್ಥಿಕ ಸ್ಥಿತಿಯನ್ನು ಸುಧಾರಿಸಲು ಕೊಡುಗೆ ನೀಡುವುದು
- ಮೀನುಗಾರಿಕೆಯ ಸಂಪನ್ಮೂಲಗಳನ್ನು ಸುಸ್ಥಿರಾತ್ಮಕವಾಗಿ ಬಳಸುವುದನ್ನು ಸಾಧಿಸುವುದು.


ಈ ಪ್ರಕ್ರಿಯೆಯಲ್ಲಿ, ಮಾರ್ಗದರ್ಶಿಕೆಗಳು ಸಣ್ಣ–ಪ್ರಮಾಣದ ಮೀನುಗಾರಿಕೆಯ ಪಾತ್ರ, ಕೊಡುಗೆ ಹಾಗೂ ಸಾಮರ್ಥ್ಯವನ್ನು ಕುರಿತು ಸಾರ್ವಜನಿಕರಲ್ಲಿ ಅರಿವು ಹೆಚ್ಚಿಸಬೇಕಾಗುತ್ತದೆ.

ಮಾನವೀಯ –ಹಕ್ಕುಗಳ ಆಧಾರಿತ ದೃಷ್ಟಿಕೋನವನ್ನು ಉತ್ತೇಜಿಸುವ ಮೂಲಕ ಈ ಮಾರ್ಗದರ್ಶಿಕೆಗಳು ಗುರಿಗಳನ್ನು ಸಾಧಿಸಬೇಕಾಗುತ್ತದೆ. ಸಣ್ಣ–ಪ್ರಮಾಣದ ಮೀನುಗಾರಿಕೆಯ ಸಮುದಾಯಗಳನ್ನು ನಿರ್ಧಾರ ಮಾಡುವ ಹಂತಗಳಲ್ಲಿ ಭಾಗವಹಿಸುವುದಕ್ಕೆ ಸಬಲರನ್ನಾಗಿಸಬೇಕಾಗುತ್ತದೆ. ಮತ್ತು ಮೀನುಗಾರರು ಸಂಪನ್ಮೂಲಗಳನ್ನು ಸುಸ್ಥಿರಾತ್ಮಕವಾಗಿ ಬಳಸುವ ಜವಾಬ್ಧಾರಿಯನ್ನು ತೆಗೆದುಕೊಳ್ಳಬೇಕಾಗುತ್ತದೆ. ಮೀನುಗಾರಿಕೆ ಸಮುದಾಯಗಳಲ್ಲಿ ಮೂಲೆಗುಂಪಾದವರ, ಅಂಚಿಗೊತ್ತರಿಸಲ್ಪಟ್ಟವರ ಲಾಭ ಹಾಗೂ ಕಾಳಜಿಗಳಿಗೆ, ಮತ್ತು ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಅಗತ್ಯಗಳಿಗೆ ಈ ಮಾರ್ಗದರ್ಶಿಕೆಗಳು ಒತ್ತು ನೀಡುತ್ತವೆ.



# ೨. ಸ್ವರೂಪ ಮತ್ತು ವ್ಯಾಪ್ತಿ

ಸುಸ್ಥಿರಾತ್ಮಕ ಸಣ್ಣ–ಪ್ರಮಾಣದ ಮೀನುಗಾರಿಕೆ ಪಡೆಯುವಿಕೆಯ ಮಾರ್ಗದರ್ಶಿಗಳು ಸ್ವಯಂ ಪ್ರೇರಿತವಾದವುಗಳು ಮತ್ತು ಜಾಗತಿಕ ವ್ಯಾಪ್ತಿ ಹೊಂದಿರತಕ್ಕಂತವುಗಳು. ವಿಶೇಷವಾಗಿ ಅಭಿವೃದ್ಧಿ ಹೊಂದುತ್ತಿರುವ ದೇಶಗಳನ್ನು ಗಣನೆಗೆ ತೆಗೆದುಕೊಳ್ಳಲಾಗಿದೆ. ಸಮುದ್ರ ಹಾಗೂ ಒಳನಾಡಿನ ನೀರಿನ ಎಲ್ಲಾ ಮೀನುಗಾರಿಕೆ ಸಂಬಂಧಿತ ಚಟುವಟಿಕೆಗಳನ್ನು ಈ ಮಾರ್ಗದರ್ಶಿಕೆಗಳು ಒಳಗೊಳ್ಳುತ್ತವೆ. ಮೀನುಗಾರಿಕೆಯಲ್ಲಿ ಭಾಗಿಗಳಾಗಿರುವವರೆಲ್ಲರಿಗೂ–ಪ್ರಭುತ್ವ, ಅಂತರರಾಷ್ಟ್ರೀಯ ಸರ್ಕಾರಗಳು, ನಾಗರಿಕ ಸಮಾಜ ಸಂಸ್ಥೆಗಳು, ಸರ್ಕಾರೇತರ ಸಂಸ್ಥೆಗಳು, ಶೈಕ್ಷಣಿಕ ಸಂಸ್ಥೆಗಳು, ಹಾಗೂ ಖಾಸಗಿ ಕ್ಷೇತ್ರ ಎಲ್ಲವನ್ನೂ ಕುರಿತು ಮಾತನಾಡುತ್ತವೆ. ಇವು ಸಣ್ಣ–ಪ್ರಮಾಣದ ಮೀನುಗಾರಿಕೆಯ ವೈವಿಧ್ಯತೆಯನ್ನು ಪರಿಗಣಿಸುತ್ತವೆ, ಹಾಗೂ ಅವರಿಗೆ ಒಂದು ನಿರ್ದಿಷ್ಟ ವ್ಯಾಖ್ಯಾನ ಇಲ್ಲವೆಂಬುದನ್ನು ಗುರುತಿಸುತ್ತವೆ. ಪ್ರಭುತ್ವಗಳು ಭಾಗಿತ್ವ ಹಾಗೂ ಪಾರದರ್ಶಕ ಕಾರ್ಯವಿಧಾನದಿಂದ–ಯಾವ ಮೀನುಗಾರಿಕೆ ಸಣ್ಣ–ಪ್ರಮಾಣದ್ದು ಎಂದು ವ್ಯಾಖ್ಯಾನಿಸಿ, – ಈ ಮಾರ್ಗದರ್ಶಿಕೆಗಳ ಪರಿಧಿಯೊಳಗೆ ತಂದು ಈ ಮಾರ್ಗದರ್ಶಿಕೆಗಳು ಮೂಲೆಗುಂಪಾದವರಿಗೆ ಪ್ರಸ್ತುತವಾಗಿರುವುದರಿಂದ ಅವರನ್ನು ಗುರುತಿಸಬೇಕಾಗುತ್ತದೆ. ರಾಷ್ಟ್ರೀಯ ಕಾನೂನು ವ್ಯವಸ್ಥೆಗಳು ಹಾಗೂ ಸಂಸ್ಥೆಗಳ ಪ್ರಕಾರವಾಗಿ ಈ ಮಾರ್ಗದರ್ಶಿಕೆಗಳನ್ನು ವಿಶ್ಲೇಷಣೆ ಮಾಡಿ ಅನ್ವಯಿಸಬೇಕು.



## ೩. ಮಾರ್ಗದರ್ಶನದ ತತ್ವಗಳು

ಈ ಮಾರ್ಗದರ್ಶಿಕೆ ೧೩ ಮಾರ್ಗದರ್ಶನ ತತ್ವಗಳನ್ನು ಒಳಗೊಂಡಿದೆ. ಇವು ಅಂತರರಾಷ್ಟ್ರೀಯ ಮಾನವ ಹಕ್ಕುಗಳ ಗುಣಮಟ್ಟ, ಜವಾಬ್ದಾರಿಯುತ ಮೀನುಗಾರಿಕೆಯ ಗುಣಮಟ್ಟ, ಹಾಗೂ ಸುಸ್ಥಿರಾತ್ಮಕ ಅಭಿವೃದ್ಧಿ ರೂಢಿಗಳು, ಮೂಲೆ ಗುಂಪಾದವರು ಹಾಗೂ ಅಂಚಿಗೆ ಒತ್ತರಿಸಲ್ಪಟ್ಟವರಿಗೆ ಗಮನ ನೀಡುವಿಕೆ ಮತ್ತು ಸಾಕಷ್ಟು ಆಹಾರದ ಹಕ್ಕಿನ ಪ್ರಗತಿಪರವಾದ ಅರಿವಿನ ಬೆಂಬಲದ ಅಗತ್ಯದ ಮೇಲೆ ಇವು ಆಧಾರವಾಗಿವೆ.

ಈ ತತ್ವಗಳು ಒಳಗೊಂಡಿರುವುದು:

೦೧ ಮಾನವ ಹಕ್ಕುಗಳು ಮತ್ತು ಘನತೆ

೦೨ ಸಂಸ್ಕೃತಿಗಳ ಮೇಲೆ ಗೌರವ

೦೩ ಪಕ್ಷಪಾತವಿಲ್ಲದಿರುವಿಕೆ

೦೪ ಲಿಂಗ ಸಮಾನತೆ ಹಾಗೂ ಸರ್ವಸಮತೆ

೦೫ ಸರ್ವಸಮತೆ ಹಾಗೂ ಸಮಾನತೆ

೦೬ ಸಮಾಲೋಚನೆ ಮತ್ತು ಭಾಗವಹಿಸುವಿಕೆ

೦೭ ಕಾನೂನು ಕಟ್ಟಳೆ

೦೮ ಪಾರದರ್ಶಕತೆ

೦೯ ಹೊಣೆಗಾರಿಕೆ

೧೦ ಆರ್ಥಿಕ, ಸಾಮಾಜಿಕ ಮತ್ತು ಪರಿಸರದ ಸುಸ್ಥಿರತೆ

೧೧ ಸಮಗ್ರ ಮತ್ತು ಅಂತರ್ಗತವಾಗಿರುವ ದೃಷ್ಟಿಕೋನಗಳು

೧೨ ಸಾಮಾಜಿಕ ಜವಾಬ್ದಾರಿ

೧೩ ಸಂಭವನೀಯ ಹಾಗೂ ಸಾಮಾಜಿಕ ಮತ್ತು ಆರ್ಥಿಕ ಸಾಧ್ಯತೆಗಳು

## ೪. ಇತರ ಅಂತರರಾಷ್ಟ್ರೀಯ ಅಸ್ತ್ರಗಳೊಡನೆ ಸಂಬಂಧ

ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಕಾನೂನುಗಳ ಕೆಳಗೆ ಸಹಮತ ಹೊಂದಿರುವ ಅಸ್ತಿತ್ವದಲ್ಲಿರುವ ಹಕ್ಕುಗಳು ಹಾಗೂ ಮುಲಾಜುಗಳು ಹಾಗೂ ಅನ್ವಯವಾಗುವ ಪ್ರಾದೇಶಿಕ ಹಾಗೂ ಅಂತರರಾಷ್ಟ್ರೀಯ ಅಸ್ತ್ರಗಳ ಕೆಳಗೆ ಸಲ್ಲಬೇಕಾದ ಗೌರವವನ್ನು ಸ್ವಯಂ ಪ್ರೇರಿತ ಬದ್ಧತೆಗಳಿಗೆ ನೀಡುತ್ತಲೇ ಸುಸ್ಥಿರವಾದ ಸಣ್ಣ-ಪ್ರಮಾಣದ ಮೀನುಗಾರಿಕೆಯ ಪಡೆಯುವಿಕೆಯ ಮಾರ್ಗದರ್ಶಿಕೆಗಳನ್ನು ಅರ್ಥೈಸಬೇಕಾಗುತ್ತದೆ ಹಾಗೂ ಅನ್ವಯಿಸಬೇಕಾಗುತ್ತದೆ.

ಈ ಮಾರ್ಗದರ್ಶಿಕೆಗಳನ್ನು ಸುಧಾರಣೆಗಳಿಗೆ, ಹಾಗೂ ಹೊಸದಾದ, ಪೂರಕ ಕಾನೂನುಗಳಿಗೆ ಹಾಗೂ ನಿಯಂತ್ರಣ ಕರಾರುಗಳಿಗೆ ಸ್ಫೂರ್ತಿಯಾಗಿ ಬಳಸಬಹುದಾಗಿದೆ. ಆದಾಗ್ಯೂ, ಅಂತರರಾಷ್ಟ್ರೀಯ ಕಾನೂನಿನಡಿಯಲ್ಲಿ ಪ್ರಭುತ್ವಕ್ಕಿರುವ ಹಕ್ಕುಗಳಿಗಾಗಲೀ, ಅಥವಾ ಮುಲಾಜುಗಳಿಗಾಗಲೀ ಮಿತಿಯೊಡ್ಡುವಂತೆ ಅಥವಾ ಚ್ಯುತಿ ಬರುವಂತೆ ಈ ಮಾರ್ಗದರ್ಶಿಕೆಗಳನ್ನು ಓದಬಾರದು.



## ೫. ಸಣ್ಣ–ಪ್ರಮಾಣದ ಮೀನುಗಾರಿಕೆ ಹಾಗೂ ಸಂಪನ್ಮೂಲಗಳ ಆಡಳಿತದಲ್ಲಿ ಭೂಮಿಯ ಕಾಲಾವಧಿಯ ಜವಾಬ್ಧಾರಿಯುತ ಆಡಳಿತ

### ಅ. ಭೂಮಿಯ ಕಾಲಾವಧಿಯ ಜವಾಬ್ಧಾರಿಯುತ ಆಡಳಿತ

ಸಣ್ಣ–ಪ್ರಮಾಣದ ಮೀನುಗಾರಿಕೆ ಸಮುದಾಯಗಳ ಸಾಮಾಜಿಕ, ಆರ್ಥಿಕ, ಮತ್ತು ಸಾಂಸ್ಕೃತಿಕ ಅಭಿವೃದ್ಧಿ ಮತ್ತು ಮಾನವ ಹಕ್ಕುಗಳ ಅರಿವುಗಳ ಕುರಿತು ಸಾಧನೆಗೈಯಲು ಸೂಕ್ತವಾದ ಸಂಪನ್ಮೂಲಗಳ ಕಾಲಾವಧಿಯ ಜವಾಬ್ಧಾರಿಯುತ ಆಡಳಿತ ಕೇಂದ್ರವಾದ ವಿಚಾರವಾಗಿರುತ್ತದೆ. ಭದ್ರವಾದ, ಸರ್ವಸಮಾನ, ಹಾಗೂ ಸಾಮಾಜಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಸೂಕ್ತವಾದ ಮೀನಿನ ಸಂಪನ್ಮೂಲಗಳ ಭೂಮಿಯ ಕಾಲಾವಧಿ ಹಕ್ಕನ್ನು, ಮೀನು ಹಿಡಿಯುವ ಪ್ರದೇಶಗಳನ್ನು ,ಹಾಗೂ ಅಕ್ಕ–ಪಕ್ಕಕ್ಕೆ ಹೊಂದಿಕೊಂಡಿರುವ ಭೂಮಿ ಮತ್ತು ಅರಣ್ಯಗಳನ್ನು ಸಣ್ಣ–ಪ್ರಮಾಣದ ಮೀನುಗಾರಿಕೆ ಸಮುದಾಯಗಳು ಹೊಂದಿರಬೇಕಾಗುತ್ತದೆ. ಮಹಿಳೆಯರ ಭೂಮಿಯ ಹಕ್ಕುಗಳಿಗೆ ವಿಶೇಷವಾದ ಗಮನವನ್ನು ಕೊಡಬೇಕಾಗುತ್ತದೆ. ನ್ಯಾಯಯುತವಾದ ಭೂಮಿಯ ಕಾಲಾವಧಿಯ ಹಕ್ಕುಗಳನ್ನು ಗುರುತಿಸಬೇಕು, ದಾಖಲಿಸಬೇಕು ಹಾಗೂ ಗೌರವಿಸಬೇಕು. ಜಲಚರ ಸಂಪನ್ಮೂಲಗಳು ಮತ್ತು ಮೂಲನಿವಾಸಿಗಳ ಹಾಗೂ ಅಲ್ಪ–ಸಂಖ್ಯಾತ ಜನಾಂಗದ ಭೂಮಿಗೆ ಸಂಪ್ರದಾಯಬದ್ಧ ಹಾಗೂ ಆದ್ಯತೆಯ ಹಕ್ಕುಗಳನ್ನು ವಿಶೇಷವಾಗಿ ಗಣನೆಗೆ ತೆಗೆದುಕೊಂಡು ಅಗತ್ಯವಿದ್ದರೆ ಕಾನೂನಿನ ಮೂಲಕ ಇವುಗಳನ್ನು ನೀಡಲು ಶ್ರಮಿಸಬೇಕಾಗುತ್ತದೆ. ಎಲ್ಲಿ ಕಾನೂನು ಸುಧಾರಣೆಗಳು ಮಹಿಳೆಯರ ಹಕ್ಕುಗಳನ್ನು ಎತ್ತಿ ಹಿಡಿಯುತ್ತವೆಯೋ ಅಲ್ಲಿ ಅವುಗಳನ್ನು ಸಾಂಪ್ರದಾಯಕ ಭೂಮಿಯ ಕಾಲಾವಧಿಯ ವ್ಯವಸ್ಥೆಯಲ್ಲಿ ಅಂತರ್ಗತ ಮಾಡಬೇಕಾಗುತ್ತದೆ. ಉಳಿಸುವಿಕೆ, ಸಂಗೋಪನೆ, ಸಂರಕ್ಷಣೆ ಮತ್ತು ಸ್ಥಳೀಯ ಜಲಚರ ಹಾಗೂ ಕರಾವಳಿಯ ಪರಿಸರ ವ್ಯವಸ್ಥೆಗಳನ್ನು ನಿರ್ವಹಿಸುವಲ್ಲಿ ಸಣ್ಣ–ಪ್ರಮಾಣದ ಮೀನುಗಾರ ಸಮುದಾಯದ, ಹಾಗೂ ಮೂಲನಿವಾಸಿಗಳ ಪಾತ್ರವನ್ನು ಗುರುತಿಸಬೇಕಾಗುತ್ತದೆ. ಎಲ್ಲಿ ಪ್ರಭುತ್ವವು ಯಜಮಾನ್ಯ ಹೊಂದಿದ ಅಥವಾ ಹಿಡಿತ ಹೊಂದಿದ ಭೂಮಿ ಹಾಗೂ ನೀರಿನ ಸಂಪನ್ಮೂಗಳು ಇರುತ್ತವೆಯೋ, ಅಲ್ಲಿ ಅವರ ಸಾಮಾಜಿಕ – ಆರ್ಥಿಕ ಮತ್ತು ಪರಿಸರಾತ್ಮಕ ಗುರಿಗಳನ್ನು ವಿಶೇಷವಾಗಿ ಅವುಗಳು ಮೀನುಗಾರಿಕೆ ಸಮುದಾಯಗಳಿಂದ ಒಗ್ಗೂಡಿ ಉಪಯೋಗಿಸಲ್ಪಡುತ್ತಿದ್ದರೆ, ಅಥವಾ ನಿರ್ವಹಿಸಲ್ಪಡುತ್ತಿದ್ದರೆ, ಇವುಗಳನ್ನು ಗಣನೆಗೆ ತೆಗೆದುಕೊಂಡು ಅವರ ಭೂಮಿಯ ಕಾಲಾವಧಿಯ ಹಕ್ಕನ್ನು ದೃಢಪಡಿಸಬೇಕಾಗುತ್ತದೆ.

ಜವಾಬ್ಧಾರಿಯುತ ಮೀನುಗಾರಿಕೆಯ ನಿಯಮಾವಳಿಗಳ ಕೋಡ್‌ನಲ್ಲಿ – ರಾಷ್ಟ್ರೀಯ ನೀರಿನಲ್ಲಿ ಸಣ್ಣ–ಪ್ರಮಾಣದ ಮೀನುಗಾರಿಕೆಗೆ ಆದ್ಯತೆ ಮೇರೆಗೆ ಲಭ್ಯತೆ ನೀಡುವುದನ್ನು ಸ್ಪಷ್ಟೀಕರಿಸಿದೆ. (ಅನುಚ್ಛೇದ ೬.೧೮) ಈ ಆಧಾರದ ಮೇಲೆ ಪ್ರಭುತ್ವಗಳು ಸಣ್ಣ–ಪ್ರಮಾಣದ ಮೀನಿಗಾರಿಕೆಗೇ ಮೀಸಲಾದ ಪ್ರದೇಶಗಳು ಎನ್ನುವಂತಹ ಕ್ರಮಗಳನ್ನು ಜಾರಿಗೊಳಿಸಬಹುದಾಗಿದೆ. ಮೂರನೇ ಪಕ್ಷಗಳ ಜೊತೆಗೆ ಸಂಪನ್ಮೂಲಗಳ ಲಭ್ಯತೆ ಕುರಿತು ಒಪ್ಪಂದಗಳನ್ನು ಮಾಡುವ ಮೊದಲು, ಅಂತಹ ಪ್ರದೇಶಗಳಿಗೆ ಸಣ್ಣ–ಪ್ರಮಾಣದ ಮೀನುಗಾರಿಕೆ ಸಮುದಾಯಗಳು ಬೇಡಿಕೆ ಇಟ್ಟಿದ್ದರೆ, ಅವುಗಳಿಗೆ ಮಾನ್ಯತೆ ನೀಡಬೇಕಾಗುತ್ತದೆ.

ಇತರ ಬಳಕೆದಾರರು ಸಣ್ಣ–ಪ್ರಮಾಣದ ಮೀನುಗಾರಿಕೆ ಪ್ರದೇಶಗಳಿಗೆ ಹೆಚ್ಚಿನ ರೀತಿಯ ಸ್ಪರ್ಧೆಯನ್ನು ಹುಟ್ಟು ಹಾಕುತ್ತಿರುವುದರಿಂದ ಅನೇಕ ರೀತಿಯ ಘರ್ಷಣೆಗಳು ಉಂಟಾಗುತ್ತವೆ. ಅವರನ್ನು ರಾಜಾ ರೋಷವಾಗಿ ಎತ್ತಂಗಡಿ ಮಾಡದಿರುವಂತೆ, ಅವರ ನ್ಯಾಯಯುತವಾದ ಭೂಮಿಯ ಕಾಲಾವಧಿಯ ಹಕ್ಕುಗಳು ಮೊಟಕಾಗದಿರುವುದಕ್ಕೆ, ಅಥವಾ ನಂದಿ ಹೋಗದಿರುವುದಕ್ಕೆ ಸಣ್ಣ–ಪ್ರಮಾಣದ ಮೀನುಗಾರ ಸಮುದಾಯಗಳಿಗೆ ವಿಶೇಷ ಗಮನ ನೀಡುವ ಭರವಸೆಯನ್ನು ಪ್ರಭುತ್ವಗಳು ನೀಡಬೇಕಾಗುತ್ತದೆ.

ದೊಡ್ಡ- ಪ್ರಮಾಣದ ಅಭಿವೃದ್ಧಿಯ ಯೋಜನೆಗಳು ಇದ್ದಂತಹ ಸಂದರ್ಭದಲ್ಲಿ ಪ್ರಭುತ್ವಗಳು ಹಾಗೂ ಇತರ ಭಾಗಿಗಳು ಅರ್ಥಪೂರ್ಣ ಸಮಾಲೋಚನೆಯ ಮಾಡುವ ಮೂಲಕ, ಸಣ್ಣ-ಪ್ರಮಾಣದ ಮೀನುಗಾರ ಸಮುದಾಯಗಳ ಮೇಲೆ ಆಗಿರುವ ಪ್ರಭಾವವನ್ನು ಅಳೆಯಲು ಪ್ರಸ್ತುತ ಪರಿಣಾಮಗಳ ಅಧ್ಯಯನಗಳನ್ನು ರೂಪಿಸಬೇಕಾಗುತ್ತದೆ.

ಸಣ್ಣ-ಪ್ರಮಾಣದ ಮೀನುಗಾರ ಸಮುದಾಯಗಳನ್ನೊಳಗೊಂಡ ಭೂಮಿಯ ಕಾಲಾವಧಿಯ ವ್ಯಾಜ್ಯಗಳಿದ್ದರೆ ಅವುಗಳನ್ನು ಪ್ರಭುತ್ವಗಳು ಸರಿಯಾಗಿ, ಶಕ್ತಾನುಸಾರ, ಹಾಗೂ ಪರಿಣಾಮಕಾರಿಯಾದ ರೀತಿಯಲ್ಲಿ ಬಗೆಹರಿಸಬೇಕಾಗುತ್ತದೆ. ಈ ಪರಿಹಾರಗಳು ಪುನಃ ವಶಕ್ಕೆ ಕೊಡುವ, ನಷ್ಟವಾಗದಿರುವ, ನ್ಯಾಯ ಪರಿಹಾರ ಹಾಗೂ ದುರಸ್ತಿಯನ್ನು ಜಾಗ್ರತೆ ಮಂಜೂರು ಮಾಡುವುದನ್ನು ಒಳಗೊಂಡಿರುತ್ತವೆ.

ಸಣ್ಣ-ಪ್ರಮಾಣದ ಮೀನುಗಾರ ಸಮುದಾಯಗಳು ಪ್ರಕೃತಿ ವಿಕೋಪಗಳಿಂದ ಹಾಗೂ ಯುದ್ಧ ಸಂಘರ್ಷಗಳಿಂದ ಹಾನಿಗೊಳಗಾಗುತ್ತಿರುವುದು ಹೆಚ್ಚಿದ್ದು, ಸ್ಥಳಾಂತರಗೊಳ್ಳುತ್ತಿದ್ದಾರೆ. ಸುಸ್ಥಿರಾತ್ಮಕ ಮೀನಿನ ಸಂಪನ್ಮೂಲಗಳನ್ನು ಮನಸ್ಸಿನಲ್ಲಿ ಇಟ್ಟುಕೊಂಡು, ಸಾಂಪ್ರದಾಯಕ ಮೀನು ಹಿಡಿಯುವ ಪ್ರದೇಶಗಳು ಹಾಗೂ ಕರಾವಳಿ ಭೂಮಿಯ ಲಭ್ಯತೆಯನ್ನು ಉಳಿಸುವ ಎಲ್ಲಾ ಪ್ರಯತ್ನಗಳನ್ನೂ ಪ್ರಭುತ್ವಗಳು ಮಾಡಬೇಕಾಗುತ್ತದೆ. ಇಂತಹ ಸಂದರ್ಭದಲ್ಲಿ ಧಾರುಣವಾಗಿ ಮಾನವ-ಹಕ್ಕುಗಳ ಉಲ್ಲಂಘನೆಯಿಂದ ನೋವಿಗೀಡಾದ ಸಮುದಾಯಗಳನ್ನು ಬೆಂಬಲಿಸಲು, ಅವರ ಬದುಕುಗಳನ್ನು ಮತ್ತೆ ಕಟ್ಟಿಕೊಳ್ಳಲು, ವ್ಯವಸ್ಥೆಗಳನ್ನು ರೂಪಿಸಬೇಕಾಗುತ್ತದೆ. ಭೂಮಿಯ ಕಾಲಾವಧಿಯ ರೂಢಿಗಳಲ್ಲಿ ಮಹಿಳೆಯರ ಬಗ್ಗೆ ಇರುವ ಎಲ್ಲಾ ಪಕ್ಷಪಾತಗಳನ್ನು ನಿರ್ಮೂಲನ ಮಾಡಬೇಕು.

## ಆ. ಸುಸ್ಥಿರಾತ್ಮಕ ಸಂಪನ್ಮೂಲಗಳ ಆಡಳಿತ

ಧೀರ್ಘಕಾಲದ ಸಂಗೋಪನೆಗೆ ಹಾಗೂ ಮೀನು ಸಂಪನ್ಮೂಲಗಳನ್ನು ಸುಸ್ಥಿರಾತ್ಮಕವಾಗಿ ಬಳಸುವುದಕ್ಕೆ ಕ್ರಮಗಳನ್ನು ಕೈಗೊಳ್ಳಬೇಕಾಗುತ್ತದೆ. ಮತ್ತು ಸಣ್ಣ-ಪ್ರಮಾಣದ ಮೀನುಗಾರಿಕೆಯ ಅವಶ್ಯಕತೆ ಹಾಗೂ ಅವಕಾಶಗಳಿಗೆ ಸಲ್ಲಬೇಕಾದ ಗೌರವವನ್ನು ಕೊಡಬೇಕಾಗುತ್ತದೆ. ಜವಾಬ್ಧಾರಿಗಳ ಜೊತೆ ಹಕ್ಕುಗಳು ಸೇರಿಕೊಂಡಿರುತ್ತವೆ. ಕರ್ತವ್ಯಗಳ ಜೊತೆ ಸಮತೋಲನ ಹೊಂದಿದ ಭೂಮಿಯ ಕಾಲಾವಧಿಯ ಹಕ್ಕುಗಳು ಸುಸ್ಥಿರವಾದ ಬಳಕೆ ಮೇಲೆ ಗಮನವನ್ನು ಕೇಂದ್ರೀಕರಿಸುತ್ತವೆ.

ಸಣ್ಣ-ಪ್ರಮಾಣದ ಮೀನುಗಾರಿಕೆ ಪರಿಸರಕ್ಕೆ ಹಾಗೂ ಸಂಬಂಧಿತ ಜೀವಿಗಳಿಗೆ ನಿಕೃಷ್ಟ ಅಪಾಯವನ್ನು ಉಂಟುಮಾಡುವ ಮೀನು ಹಿಡಿಯುವ ರೂಢಿಗಳನ್ನು ರೂಢಿಸಿಕೊಳ್ಳಬೇಕಾಗುತ್ತದೆ. ಸಂಪನ್ಮೂಲಗಳ ನಿರ್ವಹಣೆ ಜವಾಬ್ಧಾರಿಯನ್ನು ಸಣ್ಣ-ಪ್ರಮಾಣದ ಮೀನುಗಾರಿಕೆ ತೆಗೆದುಕೊಳ್ಳುವುದನ್ನು ಪ್ರಭುತ್ವಗಳು ಬೆಂಬಲಿಸಬೇಕಾಗುತ್ತದೆ. ಪ್ರಭುತ್ವಗಳು ನಕ್ಷೆ, ಯೋಜನೆ, ಜಾರಿಗೊಳಿಸುವ ಕಾರ್ಯಕ್ರಮಗಳಲ್ಲಿ ಸಮುದಾಯಗಳನ್ನು ಒಳಗೊಳ್ಳಬೇಕಾಗುತ್ತದೆ. ಮಹಿಳೆಯರು ಹಾಗೂ ಅಂಚಿಗೊತ್ತರಿಸಲ್ಪಟ್ಟವರು ಸರ್ವಸಮಾನವಾಗಿ ಭಾಗವಹಿಸಿದ್ದಾರೆಂಬುದನ್ನು ದೃಢಪಡಿಸಬೇಕಾಗುತ್ತದೆ. ರಾಷ್ಟ್ರೀಯ ಕಾನೂನುಗಳ ವ್ಯಾಪ್ತಿಯಲ್ಲಿಯೇ ಪ್ರಭುತ್ವಗಳು ಭಾಗಿತ್ವದ ಆಡಳಿತ ವ್ಯವಸ್ಥೆಯನ್ನು ಉತ್ತೇಜಿಸಬೇಕಾಗುತ್ತದೆ.

ಸಣ್ಣ-ಪ್ರಮಾಣದ ಮೀನುಗಾರಿಕೆಗೆ ಸೂಕ್ತವಾಗುವಂತೆ ಪ್ರಭುತ್ವಗಳು ಮೇಲ್ವಿಚಾರಣೆ, ಹಿಡಿತ ಹಾಗೂ ಕಣ್ಗಾವಲುಗಳ ವ್ಯವಸ್ಥೆಯನ್ನು ಉತ್ತೇಜಿಸಬೇಕು. ಪ್ರಭುತ್ವಗಳು ಕಾನೂನುಬಾಹಿರ ಹಾಗೂ ವಿನಾಶಕಾರಿ ಮೀನು ಹಿಡಿಯುವ ಪದ್ಧತಿ-ರೂಢಿಗಳನ್ನು ಹಿಮ್ಮೆಟ್ಟಿಸುವುದು, ತಡೆಯುವುದು ಹಾಗೂ ನಿರ್ಮೂಲನ ಮಾಡಬೇಕು. ಸಣ್ಣ-ಪ್ರಮಾಣದ ಮೀನುಗಾರರು ಮೇಲ್ವಿಚಾರಣೆ, ಹಿಡಿತ ಹಾಗೂ ಕಣ್ಗಾವಲು ವ್ಯವಸ್ಥೆಯನ್ನು ಬೆಂಬಲಿಸಬೇಕು ಮತ್ತು ಆಡಳಿತಕ್ಕೆ ಬೇಕಾಗುವ ಮಾಹಿತಿಯನ್ನು ಅಧಿಕಾರಿಗಳಿಗೆ ನೀಡಬೇಕು.

ಕಾನೂನಿನ ಬೆಂಬಲವಿರುವ ಕಾರ್ಯವಿಧಾನಗಳ ಮೂಲಕ ಸಹ–ಆಡಳಿತ ವ್ಯವಸ್ಥೆಗಳಿಗೆ ಪ್ರಭುತ್ವಗಳು ಪಾತ್ರ ಹಾಗೂ ಜವಾಬ್ಧಾರಿಯನ್ನು ಸ್ಪಷ್ಟಪಡಿಸಬೇಕಾಗುತ್ತದೆ. ಸಣ್ಣ–ಪ್ರಮಾಣದ ಮೀನುಗಾರಿಕೆಗಳು ಪ್ರಸ್ತುತ ಸ್ಥಳೀಯ ಹಾಗೂ ರಾಷ್ಟ್ರೀಯ ಔದ್ಯೋಗಿಕ ಸಂಸ್ಥೆಗಳಲ್ಲಿ ಸರಿಯಾಗಿ ಪ್ರತಿನಿಧಿಸುವಂತಾಗಬೇಕು. ಹಾಗೂ ಮೀನುಗಾರಿಕೆಯ ನಿರ್ಧಾರ ಹಾಗೂ ಯೋಜನೆ ಮಾಡುವ ಹಂತದಲ್ಲಿ ಭಾಗಿಯಾಗುವಂತಾಗಬೇಕು.

ಸುಗ್ಗಿಯಲ್ಲಿ, ಅದಕ್ಕಿಂತ ಮುಂಚೆ, ಹಾಗೂ ಸುಗ್ಗಿಯ ನಂತರದ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡ ಮಹಿಳೆ ಹಾಗೂ ಪುರುಷರಿಗೆ ಸಹ–ಆಡಳಿತ ವ್ಯವಸ್ಥೆಯಲ್ಲಿ ಅವರ ಜ್ಞಾನ, ದೃಷ್ಟಿಕೋನ, ಹಾಗೂ ಅಗತ್ಯಗಳನ್ನು ಕೊಡುಗೆಯಾಗಿ ನೀಡಲು ಪ್ರಭುತ್ವಗಳು ಹಾಗೂ ಸಣ್ಣ–ಪ್ರಮಾಣದ ಮೀನುಗಾರರು ಬೆಂಬಲಿಸಬೇಕು.

ಹಂಚಿಕೊಳ್ಳುವ ನೀರು ಹಾಗೂ ಸಂಪನ್ಮೂಲಗಳನ್ನು ಕುರಿತಂತೆ ಇರುವ ಗಡಿಯಾಚೆಯ ಸಮಸ್ಯೆಗಳನ್ನು ಬಗೆಹರಿಸುವಾಗ ಸಣ್ಣ–ಪ್ರಮಾಣದ ಮೀನುಗಾರಿಕೆ ಸಮುದಾಯಗಳ ಭೂಮಿಯ ಹಕ್ಕುಗಳನ್ನು ರಕ್ಷಿಸಲಾಗುತ್ತದೆ ಎಂದು ಪ್ರಭುತ್ವಗಳು ಭರವಸೆ ನೀಡಬೇಕು.

ಸಾಮರ್ಥ್ಯಕ್ಕೂ ಮೀರಿದ ಮೀನುಗಾರಿಕೆ ಸೃಷ್ಟಿಸುವ, ಮೀನುಗಳನ್ನು ಹೆಚ್ಚು ಹಿಡಿಯುವಂತೆ ಮಾಡುವ ಹಾಗೂ ಸಣ್ಣ–ಪ್ರಮಾಣದ ಮೀನುಗಾರಿಕೆ ಮೇಲೆ ಅಡ್ಡ ಪರಿಣಾಮ ಬೀರುವ ಯೋಜನೆಗಳನ್ನು ಹಾಗೂ ಆರ್ಥಿಕ ಕ್ರಮಗಳನ್ನು ಪ್ರಭುತ್ವಗಳು ಬದಿಗೊತ್ತಬೇಕು.



## ೬. ಸಾಮಾಜಿಕ ಅಭಿವೃದ್ಧಿ, ಉದ್ಯೋಗ ಹಾಗೂ ಯೋಗ್ಯ ಕೆಲಸ

ಸಣ್ಣ-ಪ್ರಮಾಣದ ಮೀನುಗಾರಿಕೆ ಅಭಿವೃದ್ಧಿ ಹಾಗೂ ಆಡಳಿತಕ್ಕೆ ಸಂಬಂಧಿಸಿದಂತೆ ಎಲ್ಲಾ ಪಕ್ಷಗಳೂ ಸಮಗ್ರ ದೃಷ್ಟಿಕೋನವನ್ನು ಹೊಂದಿರಬೇಕು. ಆರೋಗ್ಯ, ಶಿಕ್ಷಣ, ಸಾಕ್ಷರತೆ, ಡಿಜಿಟಲ್ ಶಿಕ್ಷಣ ಮತ್ತು ಇತರ ತಾಂತ್ರಿಕ ಕೌಶಲ್ಯಗಳಿಗೆ ಪ್ರಭುತ್ವಗಳು ಬಂಡವಾಳ ಹೂಡಬೇಕು.

ಸಣ್ಣ-ಪ್ರಮಾಣದ ಮೀನುಗಾರಿಕೆಯ ಇಡಿಯ ಮೌಲಿಕ ಸರಪಣಿಯಲ್ಲಿ ಪ್ರಭುತ್ವಗಳು ಸಾಮಾಜಿಕ ಭದ್ರತೆಯ ಯೋಜನೆಗಳನ್ನು ಉತ್ತೇಜಿಸಬೇಕು. ಉಳಿತಾಯ, ಸಾಲ ಮತ್ತು ವಿಮೆಗಳ ಸೇವೆಗಳಲ್ಲಿ ಮಹಿಳೆಯರನ್ನು ಒಳಗೊಳ್ಳುವ ಹಾಗೂ ಅವರಿಗೆ ಲಭ್ಯತೆ ಮೇಲೆ ಒತ್ತು ನೀಡುತ್ತಾ ಪ್ರಭುತ್ವಗಳು ಈ ಯೋಜನೆಗಳ ಬೆಳವಣಿಗೆಯನ್ನು ಪುರಸ್ಕರಿಸಬೇಕು.

ಸಣ್ಣ-ಪ್ರಮಾಣದ ಮೀನುಗಾರಿಕೆಯ ಮೌಲಿಕ ಕೊಂಡಿಗಳ ವ್ಯಾಪಕವಾದ ಚಟುವಟಿಕೆಗಳನ್ನು ಆರ್ಥಿಕ ಹಾಗೂ ಔದ್ಯೋಗಿಕ ಕ್ರಿಯೆಗಳು ಎಂದು ಎಲ್ಲರೂ ಗುರುತಿಸಬೇಕು.

ಪ್ರಭುತ್ವಗಳು ಯೋಗ್ಯ ಕೆಲಸಗಳನ್ನು ಹೆಚ್ಚಿಸಬೇಕು.

ಸಣ್ಣ-ಪ್ರಮಾಣದ ಮೀನಿನ ಕೆಲಸಗಾರರು ಹಾಗೂ ಮೀನಿನ ಕೆಲಸಗಾರರಿಗೆ ಸಮರ್ಪಕವಾಗಿರುವ ಬದುಕಿನ ಹಕ್ಕಿನ ಪ್ರಗತಿಪರ ತಿಳುವಳಿಕೆಯನ್ನು ಪ್ರಭುತ್ವಗಳು ಸಮರ್ಥಿಸಬೇಕಾಗುತ್ತದೆ. ಈ ಕೆಲಗಾರರು ಅವರ ಶ್ರಮ, ಬಂಡವಾಳ, ಹಾಗೂ ಆಡಳಿತದಿಂದ ನ್ಯಾಯವಾದ ಲಾಭ ಪಡೆಯುವುದನ್ನು ದೃಢಪಡಿಸುವುದಕ್ಕೋಸ್ಕರ ಒಳಗೊಳ್ಳುವ, ಭೇದ-ಭಾವವಿರದ ಹಾಗೂ ಸಮರ್ಥ ಆರ್ಥಿಕ ಯೋಜನೆಗಳನ್ನು ಪ್ರಭುತ್ವಗಳು ಜಾರಿಗೊಳಿಸಬೇಕು. ಪ್ರಭುತ್ವಗಳು ಹಾಗೂ ಇತರ ಪಕ್ಷಗಳು ಪರ್ಯಾಯ ಆದಾಯ ಬರುವ ಅವಕಾಶಗಳನ್ನು ಕಲ್ಪಿಸಿಕೊಡಬೇಕು. ಅವರ ಮೀನುಗಾರಿಕೆ ಸಂಬಂಧಿತ ಚಟುವಟಿಕೆಗಳನ್ನು ನಡೆಸಿಕೊಂಡು ಹೋಗಲು ಸಣ್ಣ-ಪ್ರಮಾಣದ ಮೀನುಗಾರಿಕೆ ಸಮುದಾಯಗಳಿಗೆ ಸಮರ್ಪಕವಾದ ಸ್ಥಿತಿ-ಗತಿಗಳನ್ನು ಕಲ್ಪಿಸಬೇಕು.

ವಲಸೆ ಪ್ರಕ್ರಿಯೆ ಅತ್ಯಂತ ಸಾಮಾನ್ಯ ಜೀವನಾಧಾರದ ತಂತ್ರವಾಗಿದೆ. ಗಡಿಯಾಚೆಗಿನ ಮೀನುಗಾರರ ಚಲನ-ವಲನಗಳಿಗೆ ಅಡಗಿರುವ ಕಾರಣಗಳು ಹಾಗೂ ಪರಿಣಾಮಗಳನ್ನು ಪ್ರಭುತ್ವಗಳು ಗುರುತಿಸಿ ಮಾತನಾಡಬೇಕಾಗುತ್ತದೆ.

ಔದ್ಯೋಗಿಕ ಆರೋಗ್ಯ, ರಕ್ಷಣೆ, ಹಾಗೂ ಅಸಹನೀಯ ಕೆಲಸದ ಸ್ಥಿತಿ-ಗತಿಗಳನ್ನು ಕುರಿತು ಪ್ರಭುತ್ವಗಳು ಗಮನ ಹರಿಸಬೇಕಾಗುತ್ತದೆ. ಪ್ರಭುತ್ವಗಳು ಜೀತ ಪದ್ಧತಿಯ ನಿರ್ಮೂಲನಕ್ಕೆ ಕೆಲಸ ಮಾಡಬೇಕಾಗುತ್ತದೆ ಹಾಗೂ ಸಾಲಕ್ಕೆ ಜೀತಗಾರಿಕೆ ಮಾಡುವುದನ್ನು ನಿಲ್ಲಿಸಬೇಕಾಗುತ್ತದೆ.

ಮಕ್ಕಳ ಒಳಿತು ಹಾಗೂ ಅವರ ಭವಿಷ್ಯಕ್ಕೆ ಅವಶ್ಯಕವಿರುವ ಶಿಕ್ಷಣದ ಅಗತ್ಯಗಳನ್ನು ಗುರುತಿಸಿ ಪ್ರಭುತ್ವಗಳು ಶಾಲೆಗಳಿಗೆ ಹಾಗೂ ಶಿಕ್ಷಣ ಸೌಲಭ್ಯಗಳಿಗೆ ಲಭ್ಯತೆಯನ್ನು ಒದಗಿಸಿಕೊಡಬೇಕು.

ಸಮುದ್ರದಲ್ಲಿನ ಹಾಗೂ ಒಳನಾಡಿನ ನೀರಿನ ರಕ್ಷಣೆಯ ಸಂಕೀರ್ಣತೆಯನ್ನು ಹಾಗೂ ನ್ಯೂನ್ಯತೆಗೆ ಇರುವ ಅನೇಕಾನೇಕ ಕಾರಣಗಳನ್ನು ಎಲ್ಲಾ ಪಕ್ಷಗಳೂ ಗುರುತಿಸಬೇಕು.

ಸಣ್ಣ-ಪ್ರಮಾಣದ ಮೀನುಗಾರಿಕೆಯ ರಕ್ಷಣೆ ಹಾಗೂ ಔದ್ಯೋಗಿಕ ಆರೋಗ್ಯಗಳು ಮೀನುಗಾರಿಕೆಯ ಸಾಮಾನ್ಯವಾದ ಆಡಳಿತದಲ್ಲಿ ಅಂತರ್ಗತವಾಗಿರಬೇಕು.

ಯುದ್ಧ ಘರ್ಷಣೆಯಂತಹ ಸನ್ನಿವೇಶಗಳಲ್ಲಿ ಪ್ರಭುತ್ವಗಳು ಸಣ್ಣ-ಪ್ರಮಾಣದ ಮೀನುಗಾರಿಕೆಯ ಭಾಗಿಗಳ ಮಾನವ ಹಕ್ಕುಗಳು ಹಾಗೂ ಘನತೆಯನ್ನು ರಕ್ಷಿಸಬೇಕು.

## ೭. ಮೌಲಿಕ ಸರಪಣಿಗಳು, ಸುಗ್ಗಿಯ ನಂತರ ಹಾಗೂ ಮಾರಾಟ

ಸುಗ್ಗಿಯ ನಂತರದಲ್ಲಿ ಸಣ್ಣ-ಪ್ರಮಾಣದ ಮೀನುಗಾರಿಕೆ ಕ್ಷೇತ್ರದ ಮುಖ್ಯ ಪಾತ್ರವನ್ನು ಎಲ್ಲಾ ಪಕ್ಷಗಳೂ ಗುರುತಿಸಬೇಕು. ಸುಗ್ಗಿಯ ನಂತರದ ಉಪಕ್ಷೇತ್ರದಲ್ಲಿ ಮಹಿಳೆಯರು ಕೇಂದ್ರ ಪಾತ್ರ ವಹಿಸುವುದನ್ನು ಎಲ್ಲಾ ಪಕ್ಷಗಳೂ ಗುರುತಿಸಬೇಕು.

ಸುಗ್ಗಿಯ ನಂತರ ಉಪಕ್ಷೇತ್ರದ ಮೂಲಸೌಕರ್ಯಗಳು, ಸಂಘಟನಾತ್ಮಕ ರಚನೆಗಳು, ಹಾಗೂ ಸಾಮರ್ಥ್ಯ ಅಭಿವೃದ್ಧಿಗೆ ಪ್ರಭುತ್ವಗಳು ಬಂಡವಾಳ ಹೂಡಿ ಬೆಳೆಸಬೇಕು.

ಮೀನುಗಾರರ ಹಾಗೂ ಮೀನಿನ ಕೆಲಸಗಾರರ ಸಾಂಪ್ರದಾಯಕ ಸಂಸ್ಥೆಗಳ ಸ್ವರೂಪಗಳನ್ನು ಗುರುತಿಸಬೇಕು.

ಸುಗ್ಗಿಯ ನಂತರದ ನಷ್ಟ ತಪ್ಪಿಸಲು ಹಾಗೂ ಮೌಲಿಕ ಗುಣ ಸೃಷ್ಟಿಸಲು ದಾರಿಗಳನ್ನು ಕಂಡು ಹಿಡಿಯಬೇಕು.

ಸ್ಥಳೀಯ, ರಾಷ್ಟೀಯ, ಪ್ರಾದೇಶಿಕ ಹಾಗೂ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಸಣ್ಣ-ಪ್ರಮಾಣದ ಮೀನುಗಾರಿಕೆಯ ಉತ್ಪಾದನೆಯ ಮಾರುಕಟ್ಟೆ ಸರ್ವಸಮಾನ ಹಾಗೂ ಭೇದ-ಭಾವವಿರಿದ ಹಾಗೆ ಪ್ರಭುತ್ವಗಳು ಉತ್ತೇಜಿಸಬೇಕಾಗುತ್ತದೆ. ಜನರ ಡಯಟ್ ಹಾಗೂ ಸರ್ವ ರೀತಿಯ ಪೌಷ್ಟಿಕತೆಯ ಒಳಿತಿಗೆ ಅಗತ್ಯವಿರುವ ಹಾಗೂ ಮೀನು ಯಾರಿಗೆ ದುಬಾರಿಯಲ್ಲದ ಆಹಾರವೋ ಅಂತಹವರ ಪೌಷ್ಟಿಕ ಅಗತ್ಯಗಳಿಗೆ ಅಂತರರಾಷ್ಟ್ರೀಯ ಮೀನಿನ ಮಾರುಕಟ್ಟೆಯ ಉತ್ತೇಜನ ಅಡ್ಡ ಪರಿಣಾಮ ಬೀರಬಾರದು.

ಮಾರುಕಟ್ಟೆಯ ಬೇಡಿಕೆಗಳಿಂದ ಮೀನಿನ ಸಂಪನ್ಮೂಲಗಳ ಅತಿಯಾದ ಶೋಷಣೆ ತಡೆಯಲು ಅಂತರರಾಷ್ಟ್ರೀಯ ಮಾರಾಟದಿಂದ ಬರುವ ಲಾಭಗಳನ್ನು ನ್ಯಾಯಯುತವಾಗಿ ಹಂಚಬೇಕು ಹಾಗೂ ಪರಿಣಾಮಕಾರಿಯಾದ ಮೀನುಗಾರಿಕೆ ವ್ಯವಸ್ಥೆಗಳನ್ನು ಮಾಡಬೇಕು.

ಅಂತರರಾಷ್ಟ್ರೀಯ ಮಾರಾಟದಿಂದ ಪರಿಸರ, ಮತ್ತು ಸಂಸ್ಕೃತಿ, ಆಹಾರ ಭದ್ರತೆ ಹಾಗೂ ಸಣ್ಣ-ಪ್ರಮಾಣದ ಮೀನುಗಾರಿಕೆಯ ಬದುಕಿನಾಧಾರಗಳ ಮೇಲೆ ಆಗುವ ವೈಪರೀತ್ಯಗಳನ್ನು ಪರಿಶೀಲಿಸಲು ಮತ್ತು ಸರ್ವಸಮಾನವಾಗಿ ಸಂಬೋಧಿಸುವುದಕ್ಕೋಸ್ಕರ ಪರಿಸರಾತ್ಮಕ, ಸಾಮಾಜಿಕ ಹಾಗೂ ಇತರ ಪ್ರಸ್ತುತ ಮೌಲ್ಯಮಾಪನವು (ಇತರ ಸಂಗತಿಗಳ ಜೊತೆಗೆ) ಯೋಜನೆಗಳಲ್ಲಿ ಹಾಗೂ ಕಾರ್ಯವಿಧಾನಗಳಲ್ಲಿ ಅಂತರ್ಗತವಾಗಿರಬೇಕು.

ಸಣ್ಣ-ಪ್ರಮಾಣದ ಭಾಗಿಗಳಿಗೆ ಸಮಯಕ್ಕೆ ಹಾಗೂ ನಿಖರವಾದ ಮಾರುಕಟ್ಟೆ ಹಾಗೂ ಮಾರಾಟದ ಮಾಹಿತಿ ಲಭ್ಯವಾಗುವಂತೆ ಪ್ರಭುತ್ವಗಳು ಪ್ರಯತ್ನಿಸಬೇಕು.

# ೮. ಲಿಂಗ ಸಮಾನತೆ

ಸಣ್ಣ-ಪ್ರಮಾಣದ ಮೀನುಗಾರಿಕೆಯ ಅಭಿವೃದ್ಧಿ ತಂತ್ರಗಳಲ್ಲಿ ಲಿಂಗ ವಿಚಾರವನ್ನು ಮುಖ್ಯವಾಹಿನಿಗೆ ತರುವುದು ಅಂತರ್ಗತ ಭಾಗವಾಗಿರಬೇಕು. ಅಂತರರಾಷ್ಟ್ರೀಯ ಮಾನವ-ಹಕ್ಕುಗಳ ಕಾನೂನಿನ ಪ್ರಕಾರ ಪ್ರಭುತ್ವಗಳು ಅವರ ಹಂಗು/ಮುಲಾಜುಗಳನ್ನು ಒಪ್ಪಿಕೊಂಡು, ಮಹಿಳೆಯರಿಗೆ ಸಂಬಂಧಿಸಿದಂತೆ ತಾವೂ ಗುತ್ತಿಗೆದಾರರಾಗಿರುವ ಅಸ್ತ್ರಗಳನ್ನು ಜಾರಿಗೊಳಸಬೇಕು.

ಮಹಿಳೆಯರ ವಿರುದ್ಧದ ಶೋಷಣೆಯನ್ನು ನಿರ್ಮೂಲನಗೊಳಸಲು ನಿರ್ಧಿಷ್ಟವಾದ ಕ್ರಮಗಳನ್ನು ತೆಗೆದುಕೊಳ್ಳಬೇಕು. ಯೋಜನೆ ಹಾಗೂ ಕಾಯಿದೆಗಳನ್ನು ಮಾಡುವ ಮೂಲಕ ಹಾಗೂ ಸಹಮತ ಇಲ್ಲದವುಗಳನ್ನು ಬದಲಾವಣೆ ಮಾಡಿ ಲಿಂಗ ಸಮಾನತೆಯನ್ನು ಸಾಧಿಸಬಹುದಾಗಿದೆ.

ಕಾನೂನಿನ ಪ್ರಭಾವ, ಮಹಿಳೆಯರ ಸ್ಥಾನ-ಮಾನ ಬಲಪಡಿಸಲು , ಇರುವ ಯೋಜನೆಗಳು ಹಾಗೂ ಕಾರ್ಯಚಟುವಟಿಕೆಗಳನ್ನು ಅಳೆಯಲು ಹಾಗೂ ಲಿಂಗ ಸಮಾನತೆಯನ್ನು ಸಾಧಿಸಲು ಕಾರ್ಯನಿರತವಾಗಿರುವ ಮೌಲೀಕರಣ ವ್ಯವಸ್ಥೆಯನ್ನು ಅಭಿವೃದ್ಧಿಗೊಳಸಬೇಕು.

ಮಹಿಳೆಯರ ಕೆಲಸಕ್ಕೆ ಅತ್ಯಂತ ಮುಖ್ಯವಾದ ಉತ್ತಮ ತಾಂತ್ರಿಕತೆಯನ್ನು ಅಭಿವೃದ್ಧಿ ಪಡಿಸಬೇಕು.



## ೯. ವಿಪತ್ತುಗಳ ಆಪತ್ತು ಮತ್ತು ಹವಾಮಾನ ಬದಲಾವಣೆ

ಹವಾಮಾನದ ಬದಲಾವಣೆಗೆ ಹೋರಾಡಲು ಜರೂರಿಯಾದ ಹಾಗೂ ಮಹತ್ವಾಕಾಂಕ್ಷೆಯ ಕ್ರಿಯೆಯ ಅಗತ್ಯವಿದೆ. ಸಣ್ಣ– ದ್ವೀಪಗಳಲ್ಲಿ ಬದುಕುವ ಸಣ್ಣ–ಪ್ರಮಾಣದ ಮೀನುಗಾರ ಸಮುದಾಯಗಳಿಗೆ ವಿಶೇಷ ಗಮನ ಕೊಡಬೇಕಾಗುತ್ತದೆ. ಅಂತರ್ಗತವಾಗಿರುವ ಹಾಗೂ ಸಮಗ್ರವಾದ ಇತರೇ ಕ್ಷೇತ್ರಗಳ ಸಹಭಾಗಿತ್ವ ಮುಖ್ಯವಾಗುತ್ತದೆ. ಸೂಕ್ತವಾದ ರೀತಿಯಲ್ಲಿ ಹೊಂದಿಕೊಳ್ಳುವಿಕೆಗೆ ಯೋಜನೆಗಳು, ಅಪಾಯ ನಿಕೃಷ್ಟಗೊಳಿಸುವ ಹಾಗೂ ಅನುದಾನದ ಸಹಾಯ ನೀಡಬೇಕಾಗುತ್ತದೆ.

ಸಣ್ಣ–ಪ್ರಮಾಣದ ಮೀನುಗಾರಿಕೆ ಮನುಷ್ಯರಿಂದ ಸೃಷ್ಟಿಯಾದ ಆಪತ್ತುಗಳಿಂದ ವಿಪತ್ತಿಗೆ ಒಳಗಾಗಿದ್ದರೆ, ಇದಕ್ಕೆ ಸಂಬಂಧಪಟ್ಟ ಪಕ್ಷಗಳು ಹೊಣೆಗಾರರಾಗಬೇಕಾಗುತ್ತದೆ. ಸುಗ್ಗಿಯ ನಂತರದ ಹಾಗೂ ಮಾರಾಟ ಕ್ರಿಯೆಗಳ ಬೇರೆ ಬೇರೆ ಮುಖಗಳ ಮೇಲೆ ಹವಾಮಾನ ಬದಲಾವಣೆ ಹಾಗೂ ವಿಪತ್ತುಗಳು ಬೀರಿರುವ ಪರಿಣಾಮಗಳನ್ನು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ‘ಉತ್ತಮವಾದ ಮರು ಕಟ್ಟುವಿಕೆ’ ಈ ಕಲ್ಪನೆಯನ್ನು ವಿಪತ್ತುಗಳಿಗೆ ಪ್ರತಿಕ್ರಿಯೆ ಹಾಗೂ ಮರು ಕಟ್ಟುವಿಕೆಯ ಸಂದರ್ಭದಲ್ಲಿ ಬಳಸಬೇಕಾಗುತ್ತದೆ. ಇಡಿಯ ಮೌಲಿಕ ಸರಣಿಯಲ್ಲಿ ಇಂಧನ ಶಕ್ತಿಯ ಬಳಕೆಯನ್ನು ಪ್ರೋತ್ಸಾಹಿಸಬೇಕು ಹಾಗೂ ಉತ್ತೇಜಿಸಬೇಕು.



## ೧೦. ಯೋಜನೆಯ ಸುಸಂಬದ್ಧತೆ, ಸಾಂಸ್ಕೃತಿಕ ಸಂಯೋಜನೆ ಹಾಗೂ ಸಹಭಾಗಿತ್ವ

ಸಮಗ್ರವಾದ ಅಭಿವೃದ್ಧಿಯನ್ನು ಸಣ್ಣ-ಪ್ರಮಾಣದ ಮೀನುಗಾರಿಕೆಯಲ್ಲಿ ಉತ್ತೇಜಿಸಲು, ಪ್ರಭುತ್ವಗಳು ಅಗತ್ಯವನ್ನು ಗುರುತಿಸುವುದು ಹಾಗೂ ಯೋಜನಾ ಸುಸಂಬದ್ಧತೆಯ ಕಡೆ ಸಾಗುವತ್ತ ಕೆಲಸ ಮಾಡುವುದು ಮುಖ್ಯವಾಗುತ್ತದೆ.

ಸಣ್ಣ-ಪ್ರಮಾಣದ ಮೀನುಗಾರಿಕೆಯ ಆಸಕ್ತಿಗಳು ಮತ್ತು ಅಂತರ್ಗತ ಕರಾವಳಿ ಪ್ರದೇಶದ ಆಡಳಿತದಲ್ಲಿನ ಪಾತ್ರಗಳನ್ನು ಸರಿಯಾಗಿ ಗಣನೆಗೆ ತೆಗೆದುಕೊಂಡು, ಪ್ರಭುತ್ವಗಳು ವಿಶಾಲವಾದ ಯೋಜನೆಗಳ ದೃಷ್ಟಿಕೋನಗಳನ್ನು ಅಭಿವೃದ್ಧಿಪಡಿಸಬೇಕು.


ಸಮುದ್ರ ಹಾಗೂ ಒಳನಾಡಿನ ನೀರಿನ ಜಲಚರಗಳ ಆರೋಗ್ಯ ಹಾಗೂ ಪರಿಸರ ವ್ಯವಸ್ಥೆಗಳ ಮೇಲೆ ಪರಿಣಾಮ ಬೀರುವ ಯೋಜನೆಗಳ ಸೌಹಾರ್ದತೆಯನ್ನು ಸ್ಪಷ್ಟಪಡಿಸುವುದಕ್ಕೋಸ್ಕರ ಪ್ರಭುತ್ವವು ಯೋಜನಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು.

ಮೀನುಗಾರಿಕೆ ಯೋಜನೆ ಸುಸ್ಥಿರವಾದ ಸಣ್ಣ-ಪ್ರಮಾಣದ ಮೀನುಗಾರಿಕೆಯ ಧೀರ್ಘ ಕಾಲದ ನೋಟವನ್ನು ಕೊಡಬೇಕು.

ಸಣ್ಣ-ಪ್ರಮಾಣದ ಮೀನುಗಾರಿಕೆಗಳಿಗೆ ಸರ್ಕಾರದ ಅಧಿಕಾರಗಳು ಹಾಗೂ ಏಜೆನ್ಸಿಗಳ ಸಂಪರ್ಕದ ನೆಲೆಗಳು ಸರಿಯಾಗಿ ವ್ಯಾಖ್ಯಾನಿಸಲ್ಪಟ್ಟಿರಬೇಕಾಗುತ್ತದೆ.

ಸಣ್ಣ-ಪ್ರಮಾಣದ ಮೀನುಗಾರಿಕೆಯ ಭಾಗಿಗಳು ಅವರ ಸಂಸ್ಥೆಗಳ ನಡುವೆ ಸಹಭಾಗಿತ್ವವನ್ನು ಉತ್ತೇಜಿಸಬೇಕು.

ಸಣ್ಣ-ಪ್ರಮಾಣದ ಮೀನುಗಾರಿಕೆಗೆ ಪರಿಣಾಮಕಾರಿಯಾಗಿ ಕೊಡುಗೆ ನೀಡಬಲ್ಲಂತಹ ಸ್ಥಳೀಯ ಆಡಳಿತ ವ್ಯವಸ್ಥೆಯನ್ನು ಪ್ರಭುತ್ವಗಳು ಉತ್ತೇಜಿಸಬೇಕಾಗುತ್ತದೆ. ಸುಸ್ಥಿರವಾದ ಸಣ್ಣ-ಪ್ರಮಾಣದ ಮೀನುಗಾರಿಕೆಯನ್ನು ಪಡೆಯಲು ಅಂತರರಾಷ್ಟ್ರೀಯ, ಪ್ರಾದೇಶಿಕ, ಉಪ ಪ್ರಾದೇಶಿಕಗಳ ಸಹಕಾರ ಅತ್ಯಂತ ಮುಖ್ಯವಾಗಿದೆ.



# ೧೧. ಮಾಹಿತಿ, ಸಂಶೋಧನೆ ಮತ್ತು ಸಂವಹನ

ಸಣ್ಣ-ಪ್ರಮಾಣದ ಮೀನುಗಾರಿಕೆಯ ಸುಸ್ಥಿರವಾದ ಆಡಳಿತಕ್ಕಾಗಿ ಪ್ರಭುತ್ವಗಳು ಪಾರದರ್ಶಕ ರೀತಿಯಲ್ಲಿ ನಿರ್ಧಾರಗಳಿಗೆ ಪ್ರಸ್ತುತವೆನ್ನಿಸುವ ಅಂಕಿ-ಅಂಶಗಳ ವ್ಯವಸ್ಥೆಯನ್ನು ನಿರ್ಮಾಣಮಾಡಬೇಕಾಗುತ್ತದೆ. ಪರಿಣಾಮಕಾರಿಯಾದ ನಿರ್ಧಾರ ಮಾಡುವಿಕೆಗೆ ಸಂವಹನ ಹಾಗೂ ಮಾಹಿತಿಯ ಅಗತ್ಯವಿರುತ್ತದೆ. ಪ್ರಭುತ್ವಗಳು ಭ್ರಷ್ಟಾಚಾರ ತಡೆಗಟ್ಟಲು ಪ್ರಯತ್ನಿಸುವುದಲ್ಲದೇ, ಪಾರದರ್ಶಕತೆ ಹೆಚ್ಚಿಸುವ ಮೂಲಕ ನಿರ್ಧಾರ ಮಾಡುವವರನ್ನು ಹೊಣೆಗಾರರನ್ನಾಗಿಸಬೇಕಾಗುತ್ತದೆ.

ಸಣ್ಣ-ಪ್ರಮಾಣದ ಮೀನುಗಾರ ಸಮುದಾಯಗಳು ಜ್ಞಾನ ಹೊಂದಿರುವವರು, ಕೊಡುವವರು, ಹಾಗೂ ತೆಗೆದುಕೊಳ್ಳುವವರಾಗಿರುತ್ತಾರೆ. ಆವಾಬ್ಧಾರಿಯುತ ಸಣ್ಣ-ಪ್ರಮಾಣದ ಮೀನುಗಾರಿಕೆಗೆ ಹಾಗೂ ಸುಸ್ಥಿರಾತ್ಮಕವಾದ ಅಭಿವೃದ್ಧಿಗೆ ಅಗತ್ಯವಾದ ಪ್ರಸ್ತುತ ಮಾಹಿತಿ ದೊರಕುವಂತೆ ಮಾಡಬೇಕು. ಸಣ್ಣ- ಮೀನುಗಾರಿಕೆ ಸಮುದಾಯಗಳ ಜ್ಞಾನ, ಸಂಸ್ಕೃತಿ, ರೂಢಿಗಳು, ಮತ್ತು ತಾಂತ್ರಿಕತೆಗಳು ಗುರುತಿಸಲ್ಪಡಬೇಕು ಹಾಗೂ ದಾಖಲಿಸಲ್ಪಡಬೇಕು.

ತಮ್ಮ ಜೀವನಕ್ಕೆ ಮೀನಿನ ಮೇಲೆ ಅವಲಂಬಿತರಾದ ಸಣ್ಣ-ಪ್ರಮಾಣದ ಮೀನುಗಾರಿಕೆ ಸಮುದಾಯಗಳಿಗೆ, ವಿಶೇಷವಾಗಿ ಮೂಲನಿವಾಸಿಗಳು ಹಾಗೂ ಮಹಿಳೆಯರಿಗೆ ಪ್ರಭುತ್ವಗಳು ಸಹಾಯ ಹಸ್ತವನ್ನು ಚಾಚಬೇಕಾಗುತ್ತದೆ. ಮಾಹಿತಿಯ ಹರಿಯುವಿಕೆ ಹಾಗೂ ವಿನಿಮಯಕ್ಕಾಗಿ ಅಸ್ತಿತ್ವದಲ್ಲಿರುವ ಹಾಗೂ ಸೂಕ್ತವಾದ ವೇದಿಕೆಗಳು ಮತ್ತು ಜಾಲತಾಣಗಳನ್ನು (ನೆಟ್‌ವರ್ಕ್) ಸಮುದಾಯ, ರಾಷ್ಟ್ರ ಹಾಗೂ ಉನ್ನತ ಸ್ತರದಲ್ಲಿ ಬಳಸಬೇಕಾಗುತ್ತದೆ.

ಪ್ರಭುತ್ವವು ಸಣ್ಣ-ಪ್ರಮಾಣದ ಮೀನುಗಾರಿಕೆಗೆ ಸಂಶೋಧನೆಗೆ ಇರುವ ಅನುದಾನವನ್ನು ದೊರಕುವಂತೆ ಮಾಡಬೇಕು ಹಾಗೂ ಅಂಕಿ-ಅಂಶಗಳ ಸಂಗ್ರಹಣೆ ಹಾಗೂ ಭಾಗವಹಿಸುವಿಕೆ ಮತ್ತು ಸಹಭಾಗಿತ್ವದ ವಿಶ್ಲೇಷಣೆಗಳಿಗೆ ಪ್ರೋತ್ಸಾಹ ನೀಡಬೇಕಾಗುತ್ತದೆ.

ಲಿಂಗ ಸಂಬಂಧ ಸರಿಯಾಗಿದ್ದ ಸಂದರ್ಭದಲ್ಲಿ ಮೀನುಗಾರಿಕೆಯಲ್ಲಿರುವ ಮಹಿಳೆ ಹಾಗೂ ಪುರುಷರಿಗೆ ಸರ್ವಸಮಾನ ಲಾಭವನ್ನು ಪಡೆಯುವ ಭರವಸೆ ನೀಡಬಲ್ಲ ಸುಸಜ್ಜಿತವಾದ ತಂತ್ರಗಳಿಗಾಗಿ ಪ್ರಭುತ್ವಗಳು ಸಂಶೋಧನೆಯನ್ನು ಹಲವಾರು ಸ್ತರಗಳಲ್ಲಿ ಉತ್ತೇಜಿಸಬೇಕಾಗುತ್ತದೆ. ಸಣ್ಣ-ಪ್ರಮಾಣದ ಮೀನುಗಾರಿಕೆಯ ಪಾತ್ರವನ್ನು ಗುರುತಿಸಿ, ಮೀನು ತಿನ್ನುವುದರಲ್ಲಿ ಇರುವ ಪೌಷ್ಟಿಕ ಅಂಶಗಳ ಲಾಭಗಳ ಬಗ್ಗೆ ತಿಳುವಳಿಕೆ ಹೆಚ್ಚಿಸಲು, ಪ್ರಭುತ್ವಗಳು ಗ್ರಾಹಕರ ಶಿಕ್ಷಣ ಸಭೆಗಳಲ್ಲಿ ಮೀನು ತಿನ್ನುವುದನ್ನು ಪ್ರೋತ್ಸಾಹಿಸಬೇಕಾಗುತ್ತದೆ.

## ೧೨. ಸಾಮರ್ಥ್ಯದ ಅಭಿವೃದ್ಧಿ

ನಿರ್ಧಾರ ಮಾಡುವ ಹಂತದಲ್ಲಿನ ಭಾಗವಹಿಸುವಿಕೆಯ ಸಾಮರ್ಥ್ಯವನ್ನು ಹೆಚ್ಚಿಸಬೇಕು

ಮಾರುಕಟ್ಟೆಯ ಅವಕಾಶಗಳಿಂದ ಲಾಭಪಡೆಯಲು ಸಣ್ಣ-ಪ್ರಮಾಣದ ಮೀನುಗಾರಿಕೆಗೆ ಸಾಮರ್ಥ್ಯ ಅಭಿವೃದ್ಧಿಯನ್ನು ನೀಡಬೇಕಾಗುತ್ತದೆ.

ಸಾಮರ್ಥ್ಯ ಬೆಳೆಸುವಿಕೆ ಎರೆಡು ಬಗೆಯದಾಗಿರಬೇಕು. ಸುಸ್ಥಿರಾತ್ಮಕ ಅಭಿವೃದ್ಧಿಗೆ ಹಾಗೂ ಜಯಪ್ರದವಾದ ಸಹ-ಆಡಳಿತ ಸಿದ್ಧತೆಗಳಿಗಾಗಿ ಜ್ಞಾನ ಹಾಗೂ ಕೌಶಲ್ಯಗಳು ಅಭಿವೃದ್ಧಿ ಹೊಂದಬೇಕು.



## ೧೩. ಜಾರಿಗೊಳಿಸುವಿಕೆಗೆ ಬೆಂಬಲ ಮತ್ತು ಮೇಲ್ವಿಚಾರಣೆ


ಎಲ್ಲಾ ಪಕ್ಷಗಳು ಸುಸ್ಥಿರಾತ್ಮಕ ಸಣ್ಣ-ಪ್ರಮಾಣದ ಮೀನುಗಾರಿಕೆ ಪಡೆಯುವಿಕೆಗಾಗಿ ಇವುಗಳನ್ನು ಜಾರಿಗೊಳಿಸುವುದನ್ನು ಉತ್ತೇಜಿಸಲಾಗಿದೆ.

ಪ್ರಭುತ್ವಗಳು ಸ್ವಯಂಪ್ರೇರಿತವಾಗಿ ಈ ಮಾರ್ಗದರ್ಶಿಕೆಗಳನ್ನು ಜಾರಿಗೊಳಿಸಲು ಯತ್ನಿಸುತ್ತಿದ್ದರೆ, ಸಂಯುಕ್ತ ರಾಷ್ಟ್ರಗಳು ಹಾಗೂ ಅದರ ತಜ್ಞ ಸಂಸ್ಥೆಗಳು ಅವುಗಳನ್ನು ಬೆಂಬಲಿಸಬೇಕಾಗುತ್ತದೆ.

ಪ್ರಭುತ್ವಗಳು ಹಾಗೂ ಇತರ ಪಕ್ಷಗಳು ಮಾರ್ಗದರ್ಶಿಕೆಯ ಬಗ್ಗೆ ತಿಳುವಳಿಕೆ ಮೂಡಿಸಲು ಸರಳವಾಗಿಸಿದ ಹಾಗೂ ಅನುವಾದಿತ ಪ್ರತಿಗಳ ಮೂಲಕ ಮಾಹಿತಿ ಹರಡಲು ಒಟ್ಟಾಗಿ ಕೆಲಸ ಮಾಡಬೇಕಾಗುತ್ತದೆ.

ಮೇಲ್ವಿಚಾರಣೆಯ ವ್ಯವಸ್ಥೆಗಳ ಪ್ರಾಮುಖ್ಯತೆಯನ್ನು ಗುರುತಿಸಬೇಕಾಗುತ್ತದೆ. ಸಣ್ಣ-ಪ್ರಮಾಣದ ಮೀನುಗಾರಿಕೆಯ ನ್ಯಾಯಬದ್ಧ ಪ್ರತಿನಿಧಿಗಳು ಅಭಿವೃದ್ಧಿ ಹಾಗೂ ಮಾರ್ಗದರ್ಶಿಕೆಗಳನ್ನು ಜಾರಿಗೊಳಿಸುವಿಕೆಯಲ್ಲಿ, ತಂತ್ರಗಳ ಅನ್ವಯಿಸುವಿಕೆಯಲ್ಲಿ, ಹಾಗೂ ಅವುಗಳನ್ನು ಮೇಲ್ವಿಚಾರಣೆ ಮಾಡುವ ಎರೆಡರಲ್ಲೂ ಅವರು ಭಾಗಿಗಳಾಗಬೇಕು.

ಆಹಾರ ಮತ್ತು ವ್ಯವಸಾಯ ಸಂಸ್ಥೆ ಜಾಗತಿಕ ಸಹಕಾರಿ ಕಾರ್ಯಕ್ರಮಗಳಿಗೆ ಬೆಂಬಲ ನೀಡಬೇಕು ಮತ್ತು ಉತ್ತೇಜಿಸಬೇಕು.





ಆಹಾರ ಭದ್ರತೆ ಹಾಗೂ ಬಡತನ ನಿರ್ಮೂಲನದ ಸಂದರ್ಭದಲ್ಲಿ ಸುಸ್ಥಿರಾತ್ಮಕ ಸಣ್ಣ-ಪ್ರಮಾಣದ ಮೀನುಗಾರಿಕೆಯ ಪಡೆಯುವಿಕೆಗಾಗಿ ಸ್ವಯಂ ಪ್ರೇರಿತ ಮಾರ್ಗದರ್ಶಿಕೆಗಳು ಇದರ ಪೂರ್ತಿ ಪೂರ್ತಿ ಪತ್ಯ ದೊರೆಯುವುದು : http://www.fao.org/fishery/topic/18240/en



**ಮೀನುಗಾರರ ಬೆಂಬಲಿತವಾಗಿರುವ ಅಂತರರಾಷ್ಟ್ರೀಯ ಒಕ್ಕೂಟ (ಐಸಿಎಸೆಫ್)**
೨೭, ಕಾಲೇಜ್ ರೋಡ್, ಚನ್ನೈ ೬೦೦ ೦೦೬. ಭಾರತ

ISBN 978 93 80802 62 6